# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.1087/2021

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಮೋಹನ್ ನಾಯ್ಡು | ಸಿಡಬ್ಲ್ಯೂ-2 |
| ತಂದೆಯ ಹೆಸರು | – | ವರದಪ್ಪ | ಪಿಡಬ್ಲ್ಯೂ-1 |
| ವಯಸ್ಸು | – | 65 ವರ್ಷ | |
| ಉದ್ಯೋಗ | – | ವ್ಯವಸಾಯ | |
| ವಾಸ | – | ಕುರುಚಿವೇಡು ಗ್ರಾಮ, ಚಿತ್ತೂರು, ಆಂಧ್ರಪ್ರದೇಶ್ | |

**ದಿನಾಂಕಃ15.06.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ನನಗೆ ಚಾಸಾ.1 ಘನಿಖಾನ್ ಗೊತ್ತಿಲ್ಲ. ಚಾಸಾ.3 ನನ್ನ ಮಗಳು. ಮೃತ ತಾಯಮ್ಮ ನನ್ನ ಹೆಂಡತಿ. ಮೃತ ಲತ ನನ್ನ ತಂಗಿ. ಮೃತ ವರ್ಣಿಕ ನನ್ನ ಮೊಮ್ಮಗಳು. ಮೃತ ಜಾನ್ವಿ ನನ್ನ ಮೊಮ್ಮಗಳು. ಮೃತ ಸುಷ್ಮಿತ ನನ್ನ ಮೊಮ್ಮಗಳು ಅಂದರೆ ನನ್ನ ದೊಡ್ಡ ಮಗಳ ಮಗಳು. ಆರೋಪಿ ನನ್ನ ಮಗ. ನನ್ನ ಮಗಳು, ನನ್ನ ತಂಗಿ, ಹೆಂಡತಿ ಮತ್ತು ಮೊಮ್ಮಕ್ಕಳು ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. 2019 ರಲ್ಲಿ ಸೋಮವಾರದ ದಿನ ನಮ್ಮ ಸ್ವಂತ ಊರಿನಿಂದ ಭದ್ರಾವತಿಗೆ ಇನೋವಾ ಕಾರಿನಲ್ಲಿ ಹೋಗುತ್ತಿದ್ದೆವು. ಸದರಿ ಕಾರ್ ಸಂಖ್ಯೆ ನನಗೆ ಗೊತ್ತಿಲ್ಲ. ಆ ಕಾರ್ ನನಗೆ ಸೇರಿದ್ದಲ್ಲ.

ಸದರಿ ಕಾರ್ ನನ್ನ ಮಗ ಅಂದರೆ ಆರೋಪಿ ಚಲಾಯಿಸುತ್ತಿದ್ದ. ನನ್ನ ಜೊತೆ ನನ್ನ ಹೆಂಡತಿ, ಸೊಸೆ, ತಂಗಿ, ಮೊಮ್ಮಕ್ಕಳು ಒಟ್ಟು 7 ಜನ ಪ್ರಯಾಣಿಸುತ್ತಿದ್ದೆವು. ಚಿತ್ರದುರ್ಗ ದಾಟಿ ರಾಷ್ಟ್ರಿಯ ಹೆದ್ದಾರಿ ಮೇಲೆ ಬರುವಾಗ ಅಪಘಾತವಾಗಿರುತ್ತದೆ. ಆದರೆ ಆ ಸಮಯದಲ್ಲಿ ನಾನು ನಿದ್ರೆಯಲ್ಲಿ ಇದ್ದುದ್ದರಿಂದ ಅಪಘಾತ ಹೇಗಾಯಿತು ಎಂದು ಗೊತ್ತಾಗಲಿಲ್ಲ. ಆಗ ನನ್ನ ಮಗ ಇನೋವ ಕಾರನ್ನು ಹೇಗೆ ಓಡಿಸುತ್ತಿದ್ದ ಎಂದು ನಾನು ನೋಡಿಲ್ಲ.

ಅಪಘಾತದಲ್ಲಿ ನನ್ನ ತಲೆಗೆ ರಕ್ತಗಾಯವಾಗಿ, ಬಲಗಾಲು ಮೂಳೆ ಮುರಿದಿರುತ್ತದೆ.

ಅಪಘಾತದಲ್ಲಿ ನನ್ನ ಹೆಂಡತಿ, ತಂಗಿ ಮತ್ತು ಮೊಮ್ಮಕ್ಕಳು ಮೃತಪಟ್ಟಿದ್ದಾರೆಂದು ನಂತರ ತಿಳಿಯಿತು.

ಅಪಘಾತದ ನಂತರ ಚಿಕಿತ್ಸೆಗಾಗಿ ಯಾರೋ ನನಗೆ ಚಿತ್ರದುರ್ಗ ಆಸ್ಪತ್ರೆಯಲ್ಲಿ ಸೇರಿಸಿದ್ದರು ಆ ನಂತರ ಬೆಂಗಳೂರಿನ ಆಸ್ಪತ್ರೆಯಲ್ಲಿ ದಾಖಲಿಸಿದ್ದು ನನಗೆ ಎಚ್ಚರ ಬಂದ ಮೇಲೆ ಗೊತ್ತಾಯಿತು. ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಅಪಘಾತದ ಕುರಿತು ನನ್ನನ್ನು ವಿಚಾರಿಸಿಲ್ಲ ಮತ್ತು ನನ್ನ ಹೇಳಿಕೆ ಪಡೆದುಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ಅಪಘಾತವು ದಿಃ29.04.2019 ರಂದು ಭದ್ರಾವತಿಗೆ ಬರಲು ನಮ್ಮ ಸ್ವಂತ ಊರಿನಿಂದ ಇನೋವ ಕಾರ್ ಸಂಖ್ಯೆ ಕೆಎ.03.ಎಂಜೆ.2465 ರಲ್ಲಿ ಚಿತ್ರದುರ್ಗ ಮುಖಾಂತರ ಹೋಗುತ್ತಿದ್ದೆವು ಅನ್ನುವುದು ನಿಜ. ಭದ್ರಾವತಿಯಿಂದ ಬೆಂಗಳೂರಿಗೆ ಹೋಗಲು ದಿಃ01.05.2019 ರಂದು ಸಂಜೆ 5.15 ಗಂಟೆ ಸಮಯದಲ್ಲಿ ಚಿತ್ರದುರ್ಗ ಎನ್ ಹೆಚ್-4 ರಸ್ತೆಯ ಮುಖಾಂತರ ಹೋಗುತ್ತಿರುವಾಗ ಮೇಟಿಕುರ್ಕೆ ಬಳಿ ನನ್ನ ಮಗ ಸದರಿ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿ ರಸ್ತೆ ಡಿವೈಡರ್ ಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿದ್ದಾನೆ ಅನ್ನುವುದು ಸರಿಯಲ್ಲ. ಸದರಿ ಅಪಘಾತದಿಂದ ನಮ್ಮ ಕಾರ್ ಬೆಂಗಳೂರು ಕಡೆಯಿಂದ ಚಿತ್ರದುರ್ಗದ ಕಡೆಗೆ ಹೋಗುತ್ತಿದ್ದ ಲಾರಿ ಸಂಖ್ಯೆ ಆರ್ ಜೆ.19.ಜಿಎಫ್2462 ಗೆ ಡಿಕ್ಕಿಯಾಗಿ ಕಾರ್ ನಲ್ಲಿದ್ದ ನನ್ನಹೆಂಡತಿ, ತಂಗಿ ಮತ್ತು ಮೊಮ್ಮಕಳ್ಳು ಮತ್ತು ಸೊಸೆ ಮೃತಪಟ್ಟಿದ್ದಾರೆ ಎಂದರೆ ಸಾಕ್ಷಿ ಅದು ಹೇಗಾಯಿತು ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಅಪಘಾತವು ನನ್ನ ಮಗ ಅಂದರೆ ಆರೋಪಿ ಪ್ರಕಾಶ್ ನ ನಿರ್ಲಕ್ಷತನದಿಂದ ಆಗಿದೆ ಅನ್ನುವುದು ಸರಿಯಲ್ಲ. ಪೊಲೀಸರು ನನ್ನನ್ನು ವಿಚಾರಿಸಿದಾಗ ಅಪಘಾತ ನನ್ನ ಮಗನ ತಪ್ಪಿನಿಂದ ಆಗಿದೆ ಎಂದು ಹೇಳಿದ್ದೇನೆ ಅಂದರೆ ಸರಿಯಲ್ಲ. ಪೊಲೀಸರ

ಮುಂದೆ ಆರೋಪಿ ವಿರುದ್ದ ಹೇಳಿಕೆ ಕೊಟ್ಟಿದ್ದರೂ ಸಹ ಆರೋಪಿ ನನ್ನ ಮಗನಾಗಿದ್ದರಿಂದ ಹೇಳಿಕೆ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದ ದಿಃ01.05.2019 ರ ಹೇಳಿಕೆಯಂತೆ ಎನ್ ಹೆಚ್–4 ರಸ್ತೆಯಲ್ಲಿ ನನ್ನ ಮಗನ ತಪ್ಪಿನಿಂದ ಅಪಘಾತವಾಗಿದೆ ಎಂದು . . . ನಿಪಿ–1 ರಂತೆ ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಸಿ ಕೆ ವಕೀಲರಿಂದ– ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು